ಈ) ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು 3 ಖಾಸಗಿ ಪಾಲಿಟೆಕ್ನಿಕ್‌ಗಳಿವೆ. ಅಂತೆಯೇ, ಉಡುಪಿ ಜಿಲ್ಲೆಯಲ್ಲಿ 1 ಅನುದಾನಿತ ಪಾಲಿಟೆಕ್ನಿಕ್ ಮತ್ತು 3 ಖಾಸಗಿ ಪಾಲಿಟೆಕ್ನಿಕ್‌ಗಳು ಇವೆ. ಬೇಡಿಕೆಗೆ ಅನುಗುಣವಾಗಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

5059 (5969) ಶ್ರೀ ಕೆ. ರಘುಪತಿ ಭಟ್ (ಉಡುಪಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಈ ವರ್ಷದಿಂದ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿಗೆ) ಪರೀಕ್ಷಾ ಪದ್ಧತಿಯನ್ನು ಬದಲಾಯಿಸಲಾಗುವುದೇ ; ಹೊಸ ಪದ್ಧತಿಯ ವಿವರಗಳೇನು ;

ಆ) ಈಗ ಜಾರಿಯಲ್ಲಿರುವಂತೆ ತ್ರೈಮಾಸಿಕ ಪದ್ಧತಿಯಿಂದ ಶಿಕ್ಷಣದ ಗುಣಮಟ್ಟ ತಗ್ಗುವುದಿಲ್ಲವೇ:

ಇ) ಉಡುಪಿ ಜಿಲ್ಲೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದದ್ದಕ್ಕೆ ಶಿಕ್ಷಣ ಇಲಾಖೆಗೆ ಕೊಡುಗೆ ಪುರಸ್ಕಾರ ಕೊಡಲಾಗುವುದೆ ;

ಈ) ಉಡುಪಿ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಹುದ್ದೆ ಖಾಲಿ ಇರುವುದನ್ನು ಸರ್ಕಾರ ಗಮನಿಸಿದೆಯೇ: ಕಳೆದ ಅಧಿವೇಶನದಲ್ಲಿ ಈ ಹುದ್ದೆ ತುಂಬಲು ಭರವಸೆ ಕೊಟ್ಟಿರುವುದು ನಿಜವೇ: ಹಾಗಿದ್ದಲ್ಲಿ ಈ ಹುದ್ದೆಯನ್ನು ಭರ್ತಿ ಮಾಡದೇ ಇರಲು ಕಾರಣವೇನು ; ವಿವರ ನೀಡುವುದು?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಹೌದು. ಬದಲಾಯಿಸಲಾಗುವುದು. ವಿವರಣೆ ಈ ಕೆಳಕಂಡಂತಿದೆ: 2006 ರ ಮಾರ್ಚ್‌ನಿಂದ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ ಪರೀಕ್ಷಾ ಪದ್ಧತಿಯನ್ನು ಬದಲಾಯಿಸಲಾಗುವುದು. ಅದರಂತೆ ಪ್ರತಿ ಪ್ರಶ್ನೆ ಪತ್ರಿಕೆ ಎರಡು ಭಾಗ ಹೊಂದಿದ್ದು, ಒಂದನೇ ಭಾಗದಲ್ಲಿ ಬಹು ಆಯ್ಕೆ ಪ್ರಶ್ನೆಗಳನ್ನು ಅಳವಡಿಲಾಗಿದೆ. ಎರಡನೇ ಭಾಗದಲ್ಲಿ ಈ ಕೆಳಕಂಡ ವಿವರಗಳಂತೆ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

1.	ಪ್ರಥಮ ಭಾಷೆ	ಎ ವಿಭಾಗ ಬಿ ವಿಭಾಗ	60 ಅಂಕಗಳು 65 ಅಂಕಗಳು ಬಿ ವಿಭಾಗದಲ್ಲಿ 26 ಅಂಕಗಳಿಗೆ 2 ಅಂಕಗಳ 13 ಪ್ರಶ್ನೆಗಳನ್ನು ಕೇಳಲಾಗುತ್ತದೆ. 39 ಅಂಕಗಳಿಗೆ 3 ರಿಂದ 5 ಅಂಕಗಳ ಪ್ರಶ್ನೆಗಳಿರುತ್ತವೆ.
2.	ಎರಡು ಮತ್ತು ಮೂರನೇ ಭಾಷೆ	ಎ ವಿಭಾಗ	50 ಅಂಕಗಳು ಬಿ ವಿಭಾಗದಲ್ಲಿ 50 ಅಂಕಗಳಲ್ಲಿ 24 ಅಂಕಗಳ 2ಪ್ರಶ್ನೆಗಳಿಗೆ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. 26 ಅಂಕಗಳಿಗೆ 3 ರಿಂದ 5 ಅಂಕಗಳು ನಿಗದಿಯಾಗಿರುತ್ತದೆ.
3.	ಕೋರ್ ವಿಷಯಗಳು	ಎ ವಿಭಾಗ	60 ಅಂಕಗಳು ಬಿ ವಿಭಾಗದಲ್ಲಿ 20 ಅಂಕಗಳಿಗೆ 2 ಅಂಕಗಳ 10 ಪ್ರಶ್ನೆಗಳಿರುತ್ತವೆ ಉಳಿದ 20 ಅಂಕಗಳಿಗೆ 3 ರಿಂದ 5 ಅಂಕಗಳೊಳಗೆ ಪ್ರಶ್ನೆಗಳಿರುತ್ತವೆ.

ಆ) ಶೈಕ್ಷಣಿಕ ಪದ್ಧತಿಯಲ್ಲಿನ ನ್ಯೂನತೆಯನ್ನು ಸರಿಪಡಿಸುವುದಕ್ಕಾಗಿ ತ್ರೈಮಾಸಿಕ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಹಾಗೂ ಈ ತ್ರೈಮಾಸಿಕ ಬೋಧನಾ ಪದ್ಧತಿಯಿಂದ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

ತ್ರೈಮಾಸಿಕ ಪದ್ಧತಿಯಲ್ಲಿ ಮೌಖಿಕ ಪರೀಕ್ಷೆ, ಪ್ರಾಜೆಕ್ಟ್ ವರ್ಕ್, ಮೌಲ್ಯಗಳು, ಜೀವನ ಕೌಶಲಗಳು, ಜೀವನ ವಿಜ್ಞಾನ ಇವುಗಳಿಗೂ ಸಹ ಅವಕಾಶವನ್ನು ನೀಡಲಾಗಿದೆ. ಈ ಮೌಲ್ಯಮಾಪನದ ನಂತರ ಕಲಿಕೆಯಲ್ಲಿ ನ್ಯೂನತೆಯನ್ನು ಗುರುತಿಸಿ ಪರಿಹಾರ ಬೋಧನೆಯನ್ನು ಮಾಡಲು ಇದರಲ್ಲಿ ಅವಕಾಶವಿದೆ. ಇದಲ್ಲದೆ ವರ್ಷದ ಪ್ರಾರಂಭದಲ್ಲಿ ಜೂನ್ ತಿಂಗಳಲ್ಲಿ ಪೂರ್ವ ಪರೀಕ್ಷೆ ಪರಿಹಾರ ಭೋದನೆಯನ್ನು ಸಹ ಹಮ್ಮಿಕೊಳ್ಳಲಾಗಿದೆ. ಇದಲ್ಲದೆ ಪ್ರತಿ ಘಟಕದ ಬೋಧನೆಯ ನಂತರ ಘಟಕ ಮೌಲ್ಯಮಾಪನ ಮಾಡಲೂ ಸಹ ಕ್ರಮ ಕೈಗೊಳ್ಳಲಾಗಿದೆ. ಈ ಪದ್ಧತಿಯಿಂದ ಶಿಕ್ಷಣದ ಗುಣಮಟ್ಟ ಗಣನೀಯವಾಗಿ ಸುಧಾರಿಸಿದೆ ಎಂದು ಭಾವಿಸಲಾಗಿದೆ. ಈ ಬಗ್ಗೆ ಪಿಪಿಯು ಘಟಕದಿಂದ ಸಮೀಕ್ಷೆ ನಡೆಸಲಾಗಿದ್ದು, ಈ ಸಮೀಕ್ಷೆಯಲ್ಲಿ ಬಂದ ಹಿಮ್ಮಾಹಿತಿ ಮೇರೆಗೆ 2005–06ನೇ ಸಾಲಿಗೆ ಹಲವಾರು ಮಾರ್ಪಾಡುಗಳನ್ನು ಮಾಡಲಾಗಿದೆ.

ಇ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಯಾವುದೇ ಪುರಸ್ಕಾರ ನೀಡುತ್ತಿಲ್ಲ. ಆದರೆ ಅಭಿನಂದನಾ ಪತ್ರ ನೀಡಲಾಗುತ್ತಿದೆ.

ಈ) ಈ ವಿಷಯ ಸರಕಾರದ ಗಮನಕ್ಕೆ ಬಂದಿದ್ದು ಇಲ್ಲಿನ ಉಪ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

5060 (5970) ಶ್ರೀ ರಘುಪತಿ ಭಟ್ ಕೆ. (ಉಡುಪಿ) :– ಮಾನ್ಯ ವಸತಿ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಎರಡು ವರ್ಷದಿಂದ ರಾಜ್ಯದಲ್ಲಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪಟ್ಟಿ ನೀಡುವುದು)

ಆ) ಆಶ್ರಯ ಅಂಬೇಡ್ಕರ್ ಇಂದಿರಾ ಆವಾಸ್ ಯೋಜನೆಗಳನ್ನು ಗ್ರಾಮಪಂಚಾಯತ್‌ಗಳಲ್ಲಿ ಹೇಗೆ ಆಯ್ಕೆ ಮಾಡಲಾಗುವುದು; ನಗರ ಪ್ರದೇಶಗಳಲ್ಲಿ ಹೇಗೆ ಆಯ್ಕೆ ಮಾಡಲಾಗುವುದು;

ಇ) ಇಂದಿರಾ ಆವಾಜ್ ಅಂಬೇಡ್ಕರ್ ಮತ್ತು ಆಶ್ರಯ ಯೋಜನೆಗಳ ಫಲಾನುಭವಿಗಳಿಗೆ ಉಚಿತವಾಗಿ ನೀಡುವುದರಿಂದ ಆ ಯೋಜನೆಗೂ ಆರ್.ಟಿ.ಸಿ. ಹಕ್ಕು ಪತ್ರಬೇಕು ಎಂದು ಕೇಳುವುದು ಸರಿಯೆ

ಈ) ಈ ವರ್ಷದಲ್ಲಿ ಎಷ್ಟು ಮನೆಗಳನ್ನು ಕೊಡುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆ;

ಉ) ರಾಜ್ಯದಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

ಶ್ರೀ ಅಂಜನಮೂರ್ತಿ, ವಸತಿ ಸಚಿವರು :

ಅ) ಕಳೆದ ಎರಡು ವರ್ಷಗಳಲ್ಲಿ ಅಂದರೆ 2003–2004 ಮತ್ತು 2004–2005ರಲ್ಲಿ ಕಹೊಸದಾಗಿ ಹಂಚಿಕೆಯಾದ ಮನೆಗಳ ಸಂಖ್ಯೆ ಈ ಕೆಳಗಿನಂತಿದೆ. (ಜಿಲ್ಲಾವಾರು ಪಟ್ಟಿ ಅನುಬಂಧ 'ಅ' ಮತ್ತು 'ಆ'ದಲ್ಲಿ)ಲಗತ್ತಿಸಿದೆ.